ಬೆಂಗಳೂರು ನಗರ ಹೊರವರ್ತುಲ ರಸ್ತೆಯ ಒಳಗಿನ ವ್ಯಾಪ್ತಿಯಲ್ಲಿ ಇರುವ ಘಟಕಗಳು ಶೇಕಡಾ 0.05 ಸಲ್ಫರ್ ಒಳಗೊಂಡ ಹೈಸ್ಪೀಡ್ ಡೀಸಲ್ ಅನ್ನು ಡಿ.ಜಿ.ಸೆಟ್ ಮತ್ತು ದ್ರವ ಇಂಧನ ಬಳಸುವ ಬಾಯ್ಲರ್‌ಗಳಲ್ಲಿ ಕಡ್ಡಾಯವಾಗಿ ಉಪಯೋಗಿಸುವಂತೆ ಸರ್ಕಾರವು ಆದೇಶ ಹೊರಡಿಸಿದೆ.

ಪರಿಣಾಮಕಾರಿಯಾಗಿ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಒಂದು ಕಾರ್ಯಪಡೆಯನ್ನು ಸರ್ಕಾರವು ರಚಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ಕಾರವು ಬೆಂಗಳೂರು ನಗರ ವಾಯು ಮಾಲಿನ್ಯವನ್ನು ನಿಯಂತ್ರಿಸಲು 14 ಅಂಶಗಳ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿ ಜಾರಿಗೊಳಿಸಲಾಗುತ್ತಿದೆ. ಈ ಕ್ರಿಯಾ ಯೋಜನೆಯ ಪ್ರಗತಿಯನ್ನು ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ.

144(60) ಶ್ರೀ ಧ್ರುವನಾರಾಯಣ ಆರ್(ಸಂತೇಮರಳ್ಳಿ): ಮಾನ್ಯ ಕಂದಾಯ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಭದ್ರತಾ ಯೋಜನೆಯಡಿಯಲ್ಲಿ ಬಿ.ಪಿ.ಎಲ್. ಪಟ್ಟಿಯ ವಿಧವೆಯರಿಗೆ ವಿಧವಾ ವೇತನವು ಸರ್ಕಾರದಿಂದ 2002 ರಿಂದ (ಈವರೆಗೆ) ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

145(218) ಶ್ರೀ ಗೋಪಾಲ ಪೂಜಾರಿ .ಕೆ (ಬೈಂದೂರು ಕ್ಷೇತ್ರ): ಮಾನ್ಯ ಜಗದೀಶ ಶೆಟ್ಟರ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಭೂ ನ್ಯಾಯ ಮಂಡಳಿ ಹಾಗೂ ಅಕ್ರಮ ಸಕ್ರಮ ಸಮಿತಿ ಸದಸ್ಯರಿಗೆ ಸಿಟ್ಟಿಂಗ್ ಫೀಸ್ ಮತ್ತು ಪ್ರಮಾಣ ಭತ್ಯೆ ಬಿಡುಗಡೆ ಆಗಿದೆಯೇ;

ಆ) ಆಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು):

ಅ) 1) ಕುಂದಾಪುರ ತಾಲ್ಲೂಕು ಭೂ ನ್ಯಾಯ ಮಂಡಳಿ ಸದಸ್ಯರಿಗೆ 2001-02 ರಿಂದ 2005-06ನೇ ಸಾಲಿನವರೆಗೆ ಒಟ್ಟು ರೂ.90,946-00 ಗಳನ್ನು ಪಾವತಿಸಬೇಕಾಗಿದ್ದು, ಇದರಲ್ಲಿ 2003-04ನೇ ಸಾಲಿನಲ್ಲಿ ರೂ.12,500-00 ಪಾವತಿಸಲಾಗಿದೆ. ಇನ್ನು ಬಾಕಿ ರೂ.74,446-00ಗಳನ್ನು ಪಾವತಿಸಬೇಕಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.